**ಜನ-ಪದ**

## ಕನ್ನಡ ಕೆಲಸ ಮಾಡಿದ ಸಂಸ್ಕೃತ ಮೇಷ್ಟ್ರು

**ಗೌರಿಬಿದನೂರು** ಮತ್ತು ಬೆಂಗಳೂರಿನ ಬಸವನಗುಡಿಯ ನ್ಯಾಶನಲ್ ಕಾಲೇಜುಗಳಲ್ಲಿ ಪ್ರಾಧ್ಯಾಪಕರಾಗಿದ್ದ ಎಚ್.ವಿ. ವೇಣುಗೋಪಾಲ್, ಸಾವಿರಾರು ವಿದ್ಯಾರ್ಥಿಗಳನ್ನು ಪ್ರಭಾವಿಸಿದವರು. ರಂಗಭೂಮಿ, ಸಿನಿಮಾ ಚಟುವಟಿಕೆಗಳ ಮೂಲಕ ತರಗತಿಯಾಚೆಗೂ ತಮ್ಮ ಕಲಿಕೆ ಮತ್ತು ಬೋಧನೆಯ ಆಸಕ್ತಿಗಳನ್ನು ವಿಸ್ತರಿಸಿಕೊಂಡವರು.

ವಿದ್ಯಾರ್ಥಿಗಳನ್ನು ಪರೀಕ್ಷೆಗಳಲ್ಲಿನ ಅಂಕಗಳ ರೇಸಿಗೆ ಸಿದ್ಧಪಡಿಸುವುದಷ್ಟೇ ಮೇಷ್ಟರ ಕೆಲಸವಲ್ಲ ಎನ್ನುವುದು ಎಚ್‌ವಿವಿ ಅವರ ನಂಬಿಕೆ. ಆ ನಂಬಿಕೆಯಿಂದಲೇ ತಮ್ಮ ವಿದ್ಯಾರ್ಥಿಗಳಿಗೆ ಪುಸ್ತಕದ ಸಖ್ಯದೊಂದಿಗೆ – ನಾಟಕ, ಸಿನಿಮಾ, ಸಂಗೀತ, ಎನ್‌ಸಿಸಿ, ಎನ್‌ಎಸ್‌ಎಸ್ – ಹೀಗೆ ಪಠ್ಯೇತರ ಕ್ಷೇತ್ರವೊಂದರ ಗಾಳಿಬೆಳಕೂ ದೊರೆಯುವಂತಾಗಬೇಕೆಂದು ಹಂಬಲಿಸಿದರು. ಜನಮುಖಿ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳಲು ವಿದ್ಯಾರ್ಥಿಗಳನ್ನು ಪ್ರೇರೇಪಿಸಿದರು.



ಸಂಸ್ಕೃತದ ಮೇಷ್ಟರಾದರೂ ಎಚ್‌ವಿವಿ ಅವರು ಮಾಡಿದ್ದು ಕನ್ನಡ ಬಲಪಡಿಸುವ ಕೆಲಸವನ್ನು. ‘ಸಮುದಾಯ’ದ ರಂಗಚಟುವಟಿಕೆಗಳಲ್ಲಿ ಸಕ್ರಿಯರಾಗಿದ್ದ ಅವರು, ಜನಪರ ಚಳವಳಿಗಳ ಭಾಗವಾಗಿದ್ದರು. ಸಿನಿಮಾದ ಕಡುಮೋಹಿಯಾಗಿದ್ದರು. ತಮ್ಮ ಮನೆಯಲ್ಲಿ ‘ಉನ್ನತಿ’ ಹೆಸರಿನ ಹೋಂ ಥಿಯೇಟರ್ ರೂಪಿಸಿ, ಸಿನಿಮಾ ವಿದ್ಯಾರ್ಥಿಗಳ ರಸಗ್ರಹಣದ ವಿಕಸನಕ್ಕೆ ಸಾಕಷ್ಟು ದ್ರವ್ಯ ಒದಗಿಸುತ್ತಿದ್ದರು.

ಅರವತ್ತೇಳರ ಎಚ್‌ವಿವಿ ಜೂನ್ 24ರಂದು ನಿಧನರಾದಾಗ, ಸಾಮಾಜಿಕ ಜಾಲತಾಣಗಳಲ್ಲಿ ಶಿಷ್ಯಬಳಗ ಮಾಡಿದ ಗುಣಗಾನ ಮೇಷ್ಟರೊಬ್ಬರ ಸಾರ್ಥಕ ಬದುಕಿಗೆ ಹಿಡಿದ ಕನ್ನಡಿಯಂತಿತ್ತು.



## ಅಕ್ಷತಾ ಅಜೇಯ ಶತಕ

**ಅಕ್ಷತಾ** ಮತ್ತು ಅಹರ್ನಿಶಿ ಒಂದು ಪುಸ್ತಕದ ಎರಡು ಮುಖಗಳಿದ್ದಂತೆ. ಅಕ್ಷತಾ ಅವರಿಂದ ಅಹರ್ನಿಶಿಯೋ, ಅಹರ್ನಿಶಿಯಿಂದ ಅಕ್ಷತಾ ಅವರೋ ಬಿಡಿಸಿ ಹೇಳುವುದು ಕಷ್ಟ.

ಅಕ್ಷತಾ ಹುಂಚದಕಟ್ಟೆ ಕನ್ನಡ ಸಾಹಿತ್ಯಲೋಕಕ್ಕೆ ಪರಿಚಿತರಾದುದು ಕವಿತೆಗಳ ಮೂಲಕ. ಕಾವ್ಯದ ಹಾದಿಯಲ್ಲಿ ಅವರು ಎಷ್ಟು ಹೂವುಗಳನ್ನು ಹೆಕ್ಕಿದರೋ ಹೇಳುವುದು ಕಷ್ಟ. ಆದರೆ, ಪ್ರಕಟಣೆಯ ಹಾದಿಯಲ್ಲಿ ಅವರು ಹೆಕ್ಕಿದ್ದೆಲ್ಲ ಕಾವ್ಯವೇ. ಹೊಸ ಬರಹಗಾರರೆಂದರೆ ಪ್ರಕಾಶಕರು ಹೌಹಾರುವ ದಿನಗಳಲ್ಲಿ, ಅಕ್ಷತಾ ಅವರು ಹೊಸ ಬರಹಗಾರರ ಕಥೆ, ಕವನ, ಪ್ರಬಂಧಗಳನ್ನು ಹುಡುಕಿ ಹುಡುಕಿ ಪುಸ್ತಕ ಮಾಡಿದರು. ಭಿನ್ನ ಹಿನ್ನೆಲೆ, ಸಂವೇದನೆಗಳ ಬರಹಗಾರರನ್ನು ‘ಅಹರ್ನಿಶಿ’ಯಡಿ ಕಲೆಹಾಕಿದರು. ಕೃತಿಗಳಲ್ಲೂ ಅದೆಷ್ಟು ವೈವಿಧ್ಯ – ಪತ್ರಕರ್ತರ ಅನುಭವ ಕಥನಗಳು, ಸಾಂಸ್ಕೃತಿಕ ವ್ಯಕ್ತಿತ್ವಗಳ ಜೀವನ ಕಥನಗಳು, ಅಪರೂಪದ ಅನುವಾದಗಳು...

ಪ್ರಕಟಣೆ ಮಾತ್ರವಲ್ಲ, ಪ್ರಕಟಿಸಿದ ಪುಸ್ತಕಗಳನ್ನು ಸಹೃದಯರಿಗೆ ಮುಟ್ಟಿಸುವುದರಲ್ಲೂ ವಿಶೇಷ ಆಸ್ಥೆ. ಅಕ್ಷತಾ ಗ್ರಂಥಾಲಯಗಳನ್ನು ನೆಚ್ಚಿದ ಪ್ರಕಾಶಕಿಯಲ್ಲ; ಓದುಗರನ್ನು ನಂಬಿದವರು. ಅಚ್ಚುಕಟ್ಟುತನ ಮತ್ತು ಗುಣಮಟ್ಟದ ‘ಅಹರ್ನಿಶಿ’ ಪ್ರಕಟಣೆಗಳೆಂದರೆ ಓದುಗರಿಗೆ ಮಿನಿಮಮ್ ಗ್ಯಾರಂಟಿ.

ರಾಮು ಕವಿತೆಗಳ ‘ವಿಷ್ಣುಚಕ್ರ’ ಅಹರ್ನಿಶಿಯ ನೂರನೇ ಕೃತಿ. ಅಕ್ಷತಾ–ಅಹರ್ನಿಶಿ ಅಜೇಯ ಶತಕದ ಓಟಕ್ಕೆ ಅಭಿನಂದನೆಗಳು. ನೂರರ ನಂತರದ್ದು ಏರುದಾರಿಯಲ್ಲಿ, ಜಾಣ ಜಾಣೆಯರ ಕೃತಿಗಳಿಗಷ್ಟೇ ಅಲ್ಲ; ಅಕ್ಷತಾ ಅವರೊಳಗಿನ ಕವಿಯ ಅಭಿವ್ಯಕ್ತಿಗೂ ಆಗಾಗ್ಗೆ ಬಿಡುಗಡೆಯ ಭಾಗ್ಯ ದೊರೆಯುವಂತಾಗಲಿ.

●